# ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ

**ಸಿ.ಸಿ. ನಂಬ್ರಃ 474/2024**
**ಸಿ.ಡಬ್ಲ್ಯೂ 12**
**ಪಿ.ಡಬ್ಲ್ಯೂ-12**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜಕುಮಾರ |
| ತಂದೆಯ ಹೆಸರು | : | ಸಿದ್ದನಗೌಡ |
| ಪ್ರಾಯ | : | 37 ವರ್ಷ |
| ಉದ್ಯೋಗ | : | ಪಿ.ಎಸ್.ಐ. ಕಲಬುರ್ಗಿ |
| ವಾಸ | : | ಕಲಬುರ್ಗಿ |

ದಿನಾಂಕಃ 27-10-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 2019- ನವೆಂಬರ್ ರಿಂದ ಮೇ-2020 ರವರೆಗೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 24-10-2020 ರಂದು ಜಯಂತ ಕಾರ್ಣಿಕ ಎಂಬುವವರು ಠಾಣೆಗೆ ಬಂದು ಶ್ರೀ ವಿನಾಯಕ ರಾಮೇಶ್ವರ ದೇವಸ್ಥಾನದ ಹುಂಡಿಯನ್ನು ಯಾರೋ ಒಬ್ಬ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಎಂದು ದೂರು ನೀಡಿರುತ್ತಾರೆ. ದೂರಿನ ಪ್ರಕಾರ ನಮ್ಮ ಠಾಣಾ ಅಪರಾಧ ಸಂಖ್ಯೆ 61/2020 ರಂತೆ ಪ್ರಕರಣ ದಾಖಲಾಗಿದ್ದು, ಆ ಪ್ರಕರಣದ ತನಿಖಾಧಿಕಾರಿಯಿಂದ ಪ್ರಕರಣದ ಕಡತವನ್ನು ತೆಗೆದುಕೊಂಡು ಆರೋಪಿಯ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಸಿಬ್ಬಂದಿಗಳು ಆರೋಪಿಯಾದ ವಿಜೇತಾ ಹೆಗ್ಡೆಯನ್ನು ಸಂಜೆ 6-30 ಕ್ಕೆ ಹಾಜರುಪಡಿಸಿರುತ್ತಾರೆ.

3. ಮರುದಿನ ದಿಃ 25-10-2020 ರಂದು ಆರೋಪಿತನನ್ನು ವಿಚಾರಣೆ ಮಾಡಿದಾಗ ಆರೋಪಿ ನಮ್ಮ ಠಾಣಾ ವ್ಯಾಪ್ತಿಯ ದೇವಸ್ಥಾನದ ಹುಂಡಿ ಮತ್ತು ತನ್ನ ಮನೆಯ ಪಕ್ಕದಲ್ಲಿರುವ ರಾಮ ಮೊಗವೀರ ಮನೆ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಅದೇ ದಿನ ಆರೋಪಿ ಕಳ್ಳತನ ಮಾಡಿ ಎಸೆದ ಹುಂಡಿಯ ಸ್ಥಳವನ್ನು ಪಂಚರ ಸಮಕ್ಷಮ ಜಪ್ತು ಪಂಚನಾಮೆಯನ್ನು ಜರುಗಿಸಿ

ಮತ್ತು ಆರೋಪಿತನು ರಾಮ ಮೊಗವೀರ ರವರ ಮನೆಯಿಂದ ಕಳ್ಳತನ ಮಾಡಿದಂತ ಆಭರಣಗಳನ್ನು ಕುಂದಾಪುರ ನಗರ ಪಟ್ಟಣದ ಪ್ರಭು ಜ್ಯುವೇಲರ್ಸ್ ಅಂಗಡಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುವುದರಿಂದ ಪಂಚರ ಸಮಕ್ಷಮ ಪ್ರಭು ಜ್ಯುವೆಲರ್ಸ್ ಅಂಗಡಿಗೆ ಹೋಗಿ ಪಂಚರಾದ ಚಾಸಾ-9 ಮತ್ತು ಚಾಸಾ-10 ರವರ ಸಮಕ್ಷಮ 3 ಉಂಗುರ ಮತ್ತು ಒಂದು ತಾಳಿ ಸರವನ್ನು ಜಪ್ತು ಪಂಚನಾಮೆ ಜರುಗಿಸಿ, ಅದನ್ನು ಪಿ ಎಫ್ ನಂ. 73/2020 ರಂತೆ ದಾಖಲಿಸಿರುತ್ತೇನೆ. ಸದರಿ ಜಪ್ತಾದ ಮು.ಮಾಲುಗಳ ಶಂಕರನಾರಾಯಣ ಪೊಲೀಸ್ ಠಾಣೆಗೆ ಸಂಬಂದಪಟ್ಟಿದ್ದಾಗಿರುವುದರಿಂದ ಸದರಿ ಸಂಬಂದ ಪಟ್ಟ ಠಾಣೆಗೆ ವರ್ಗಾಯಿಸಲು ಅನುಮತಿ ಕೋರಿದ್ದು, ಸದರಿ ಮು.ಮಾಲುಗಳನ್ನು ಶಂಕರನಾರಾಯಣ ಪೊಲೀಸ್ ಠಾಣೆಗೆ ವರ್ಗಾಯಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ಜಯಂತ್ ಕಾರ್ಣಿಕರವರು ಕೊಟ್ಟ ದೂರಿನ ದೃಡೀಕೃತ ಪ್ರತಿಯನ್ನು ನಿಪಿ-11 ಅಂತಲೂ ಪಂಚಾನಾಮೆಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಜೆ ಜಿ ಎನ್ ವಕೀಲರಿಂದ

ಪ್ರಕರಣದ ಬಗ್ಗೆ ದೂರನ್ನು ಜಯಂತ್ ಕಾರ್ಣಿಕರವರು ತಂದು ಕೊಟ್ಟಿರುತ್ತಾರೆ. ಈ ಪ್ರಕರಣದಲ್ಲಿ ನಾನು ಹುಂಡಿಯನ್ನು ವಶಪಡಿಸಿಕೊಂಡಿರುತ್ತೇನೆ. ಪ್ರಭು ಜ್ಯುವೆಲರ್ಸ್‌ನ ಮಾಲೀಕನನ್ನು ನಾನು ವಿಚಾರಣೆ ಮಾಡಿರುತ್ತೇನೆ. ಪ್ರಭು ಜ್ಯುವೇಲರ್ಸ್‌ನ ಮಾಲೀಕರ ಹೆಸರು ಪ್ರಭು ಎಂದು ಇರುತ್ತದೆ. ನಾನು ಪ್ರಭು ಜ್ಯುವೇಲರ್ಸ್‌ಗೆ ಹೋಗಿದ್ದು ಇಲ್ಲ, ಮಾಲೀಕರನ್ನು ವಿಚಾರಣೆ ಮಾಡಿದ್ದು ಇಲ್ಲ ಮತ್ತು ಅವರನ್ನು ಈ ಪ್ರಕರಣದ ಸಾಕ್ಷಿದಾರನನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಹೆಚ್ ಸಿ ಸತೀಶ, ಅನೀಲ ಹಾಗೂ ಚಿದಾನಂದ ರವರುಗಳನ್ನು ಆರೋಪಿಯ ಪತ್ತೆಗಾಗಿ ನೇಮಿಸಿರುತ್ತೇನೆ. ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿಯಾಗಿಲ್ಲ. ನಾನು ಆರೋಪಿಯ ಪತ್ತೆಗಾಗಿ ಯಾವುದೇ ಸಿಬ್ಬಂದಿ ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿಯನ್ನು ಅವರು ನನ್ನ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮು.ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ